# الْأَذْكَارُ

## من الكتاب والسنة

## ದೈನಂದಿನ

# ದಿಕ್ರ್‌ಗಳು

## ಕುರ್‌ಆನ್ ಮತ್ತು ಸುನ್ನತ್ತಿನಿಂದ

المكتب التعاوني للدعوة والإرشاد وتوعية الجاليات بالعزيزية بجدة

**فرع إدارة توعية الجاليات بالبلد**

**0549656545**

Email: newmuslims2010@hotmail.com

## ನಿದ್ದೆಯಿಂದ ಎದ್ದೇಳುವಾಗ

«الْحَمْدُ لِلَّهِ الَّذِي أَحْيَانَا، بَعْدَ مَا أَمَاتَنَا، وَإِلَيْهِ النُّشُورُ»

(ಅಲ್‌ಹಮ್ದುಲಿಲ್ಲಾಹಿಲ್ಲದೀ ಅಹ್ಯಾನಾ ಬಅ್‌ದ ಮಾ ಅಮಾತನಾ, ವಇಲೈಹಿ ನ್ನುಶೂರ್)

"ಮೃತಪಡಿಸಿದ ಬಳಿಕ ನಮಗೆ ಜೀವವನ್ನು ನೀಡಿದ ಅಲ್ಲಾಹನಿಗೆ ಸರ್ವಸ್ತುತಿ; ಪುನರುತ್ಥಾನವು ಅವನ ಬಳಿಗೇ ಆಗಿದೆ."

[ಅಲ್‌ಬುಖಾರಿ 6314]

## ಶೌಚಾಲಯವನ್ನು ಪ್ರವೇಶಿಸುವಾಗ

«اللَّهُمَّ إِنِّي أَعُوذُ بِكَ مِنَ الْخُبُثِ وَالْخَبَائِثِ»

(ಅಲ್ಲಾಹುಮ್ಮ ಇನ್ನೀ ಅಊದು ಬಿಕ ಮಿನಲ್ ಖುಬುಸಿ ವಲ್ ಖಬಾಇಸ್)

"ಓ ಅಲ್ಲಾಹ್! ನಾನು ಗಂಡು ಶೈತಾನರಿಂದ ಮತ್ತು ಹೆಣ್ಣು ಶೈತಾನರಿಂದ ನಿನ್ನೊಡನೆ ರಕ್ಷೆ ಬೇಡುತ್ತಿದ್ದೇನೆ." [ಅಲ್‌ಬುಖಾರಿ 142]

## ಶೌಚಾಲಯದಿಂದ ನಿರ್ಗಮಿಸುವಾಗ

«غُفْرَانَكَ»

(ಗುಫ್ರಾನಕ್)

“(ಓ ಅಲ್ಲಾಹ್) ನಿನ್ನಲ್ಲಿ ಕ್ಷಮೆ ಬೇಡುತ್ತಿದ್ದೇನೆ” [ಅಬೂ ದಾವೂದ್ 30]

## ಆಹಾರ ಸೇವಿಸುವ ಮುನ್ನ

«بِسْمِ اللهِ»

(ಬಿಸ್ಮಿಲ್ಲಾಹ್)

“ಅಲ್ಲಾಹನ ನಾಮದಿಂದ”

## ಆರಂಭದಲ್ಲಿ ಬಿಸ್ಮಿ ಹೇಳಲು ಮರೆತುಬಿಟ್ಟರೆ

«بِسْمِ اللهِ أَوَّلَهُ وَآخِرَهُ»

(ಬಿಸ್ಮಿಲ್ಲಾಹಿ ಅವ್ವಲಹೂ ವಆಖಿರಹೂ)

“ಅಲ್ಲಾಹನ ನಾಮದಿಂದ, ಇದರ ಆದಿಯಲ್ಲಿ ಮತ್ತು ಅಂತ್ಯದಲ್ಲಿ”

[ಅಬೂ ದಾವೂದ್ 3767]

## ಆಹಾರ ಸೇವಿಸಿದ ಬಳಿಕ

«الْحَمْدُ لِلَّهِ الَّذِي أَطْعَمَنِي هَذَا الطَّعَامَ وَرَزَقَنِيهِ، مِنْ غَيْرِ حَوْلٍ مِنِّي وَلَا قُوَّةٍ»

(ಅಲ್‌ಹಮ್ದು ಲಿಲ್ಲಾಹಿಲ್ಲದೀ ಅತ್‌ಅಮನೀ ಹಾದ ತ್ತಆಮ ವರಝಕನೀಹಿ ಮಿನ್ ಗೈರಿ ಹೌಲಿನ್ ಮಿನ್ನೀ ವಲಾ ಕುವ್ವಃ)

“ನನ್ನಲ್ಲಿ ಯಾವುದೇ ಶಕ್ತಿಯೋ ಸಾಮರ್ಥ್ಯವೋ ಇಲ್ಲದೆ ಈ ಆಹಾರವನ್ನು ನನಗೆ ಉಣಿಸಿದ ಮತ್ತು ಇದನ್ನು ನನಗೆ ಒದಗಿಸಿದ ಅಲ್ಲಾಹನಿಗೆ ಸರ್ವಸ್ತುತಿ.” [ಅಬೂ ದಾವೂದ್ 4023]

## ಉಡುಪು ಧರಿಸುವಾಗ

«الْحَمْدُ لِلَّهِ الَّذِي كَسَانِي هَذَا الثَّوْبَ وَرَزَقَنِيهِ، مِنْ غَيْرِ حَوْلٍ مِنِّي وَلَا قُوَّةٍ»

(ಅಲ್‌ಹಮ್ದುಲಿಲ್ಲಾಹಿಲ್ಲದೀ ಕಸಾನೀ ಹಾದ ಸ್ಸೌಬ ವರಝಕನೀಹಿ ಮಿನ್ ಗೈರಿ ಹೌಲಿನ್ ಮಿನ್ನೀ ವಲಾ ಕುವ್ವಃ)

“ನನ್ನಲ್ಲಿ ಯಾವುದೇ ಶಕ್ತಿಯೋ ಸಾಮರ್ಥ್ಯವೋ ಇಲ್ಲದೆ ಈ ಉಡುಪನ್ನು ನನಗೆ ಉಡಿಸಿದ ಮತ್ತು ಇದನ್ನು ನನಗೆ ಒದಗಿಸಿದ ಅಲ್ಲಾಹನಿಗೆ ಸರ್ವಸ್ತುತಿ.” [ಅಬೂ ದಾವೂದ್ 4023]

## ಹಾಲು ಕುಡಿಯುವ ಮುನ್ನ

«اللَّهُمَّ بَارِكْ لَنَا فِيهِ وَزِدْنَا مِنْهُ»

(ಅಲ್ಲಾಹುಮ್ಮ ಬಾರಿಕ್ ಲನಾ ಫೀಹಿ ವಝಿದ್‌ನಾ ಮಿನ್‌ಹು)

“ಓ ಅಲ್ಲಾಹ್! ನಮಗೆ ಅದರಲ್ಲಿ ಬರಕತ್ತನ್ನು ನೀಡು ಮತ್ತು ಅದನ್ನು ನಮಗೆ ಅಧಿಕಗೊಳಿಸು” [ಅತ್ತಿರ್ಮಿದಿ 3455]

## ಆತಿಥೇಯನಿಗೆ

«اللَّهُمَّ بَارِكْ لَهُمْ فِي مَا رَزَقْتَهُمْ، وَاغْفِرْ لَهُمْ وَارْحَمْهُمْ»

(ಅಲ್ಲಾಹುಮ್ಮ ಬಾರಿಕ್ ಲಹುಮ್ ಫೀಮಾ ರಝಕ್ತಹುಮ್ ವಗ್ಫಿರ್ ಲಹುಮ್ ವರ್ಹಮ್‌ಹುಮ್)

“ಓ ಅಲ್ಲಾಹ್! ನೀನು ಅವರಿಗೆ ನೀಡಿದ ಆಹಾರದಲ್ಲಿ ಅವರಿಗೆ ಬರಕತ್ ನೀಡು, ಅವರನ್ನು ಕ್ಷಮಿಸು ಮತ್ತು ಅವರಿಗೆ ದಯೆತೋರು.” [ಮುಸ್ಲಿಂ 2042]

## ಮನೆಯಿಂದ ಹೊರಡುವಾಗ

«بِسْمِ اللهِ تَوَكَّلْتُ عَلَى اللهِ، لَا حَوْلَ وَلَا قُوَّةَ إِلَّا بِاللهِ»

(ಬಿಸ್ಮಿಲ್ಲಾಹಿ ತವಕ್ಕಲ್ತು ಅಲಲ್ಲಾಹಿ, ಲಾ ಹೌಲ ವಲಾ ಕುವ್ವತ ಇಲ್ಲಾ ಬಿಲ್ಲಾಹ್)

"ಅಲ್ಲಾಹನ ನಾಮದಿಂದ, ನಾನು ಅಲ್ಲಾಹನ ಮೇಲೆ ಭರವಸೆಯನ್ನಿಟ್ಟಿರುವೆನು, ಅಲ್ಲಾಹನ ಹೊರತು ಯಾವುದೇ ಶಕ್ತಿಯಾಗಲಿ, ಸಾಮರ್ಥ್ಯವಾಗಲಿ ಇಲ್ಲ." [ಅಬೂ ದಾವೂದ್ 5095]

«اللَّهُمَّ إِنِّي أَعُوذُ بِكَ أَنْ أَضِلَّ أَوْ أُضَلَّ، أَوْ أَزِلَّ أَوْ أُزَلَّ، أَوْ أَظْلِمَ أَوْ أُظْلَمَ، أَوْ أَجْهَلَ أَوْ يُجْهَلَ عَلَيَّ»

(ಅಲ್ಲಾಹುಮ್ಮ ಇನ್ನೀ ಅಊದು ಬಿಕ ಅನ್ ಅದಿಲ್ಲ ಅವ್ ಉದಲ್ಲ, ಅವ್ ಅಝಿಲ್ಲ ಅವ್ ಉಝುಲ್ಲ, ಅವ್ ಅದ್ಲಿಮ ಅವ್ ಉದ್ಲಮ, ಅವ್ ಅಜ್‌ಹಲ ಅವ್ ಯುಜ್‌ಹಲ ಅಲಯ್ಯ)

“ಓ ಅಲ್ಲಾಹ್! ನಾನು ದಾರಿತಪ್ಪದಿರಲು, ಇತರರು ನನ್ನನ್ನು ದಾರಿತಪ್ಪಿಸದಿರಲು, ನಾನು ಪಥಭ್ರಷ್ಟನಾಗದಿರಲು, ಇತರರು ನನ್ನನ್ನು ಪಥಭ್ರಷ್ಟಗೊಳಿಸದಿರಲು, ನಾನು ಅನ್ಯಾಯವೆಸಗದಿರಲು, ಇತರರಿಂದ ಅನ್ಯಾಯಕ್ಕೊಳಗಾಗದಿರಲು, ನಾನು ಅವಿವೇಕಿಯಂತೆ ವರ್ತಿಸದಿರಲು ಮತ್ತು ಇತರರು ನನ್ನನ್ನು ಅವಿವೇಕಿಯಂತೆ ನಡೆಸಿಕೊಳ್ಳದಿರಲು ನಿನ್ನಲ್ಲಿ ರಕ್ಷೆ ಬೇಡುತ್ತಿದ್ದೇನೆ.” [ಅಬೂ ದಾವೂದ್ 5094]

## ಪೇಟೆಯನ್ನು ಪ್ರವೇಶಿಸುವಾಗ

«لَا إِلَٰهَ إِلَّا اللهُ وَحْدَهُ لَا شَرِيكَ لَهُ، لَهُ الْمُلْكُ وَلَهُ الْحَمْدُ، يُحْيِي وَيُمِيتُ، وَهُوَ حَيٌّ لَا يَمُوتُ، بِيَدِهِ الْخَيْرُ، وَهُوَ عَلَى كُلِّ شَيْءٍ قَدِيرٌ»

(ಲಾ ಇಲಾಹ ಇಲ್ಲಲ್ಲಾಹು ವಹ್ದಹೂ ಲಾ ಶರೀಕ ಲಹೂ ಲಹುಲ್ ಮುಲ್ಕು ವಲಹುಲ್ ಹಮ್ದು ಯುಹ್ಯೀ ವಯುಮೀತು ವಹುವ ಹಯ್ಯುನ್ ಲಾ ಯಮೂತು ಬಿಯದಿಹಿಲ್ ಖೈರು ವಹುವ ಅಲಾ ಕುಲ್ಲಿ ಶೈಇನ್ ಕದೀರ್)

“ಅಲ್ಲಾಹನ ಹೊರತು ಅನ್ಯ ಸತ್ಯ ಆರಾಧ್ಯರಿಲ್ಲ, ಅವನು ಏಕೈಕನು, ಅವನಿಗೆ ಸಹಭಾಗಿಗಳಿಲ್ಲ, ಆಧಿಪತ್ಯವು ಅವನದ್ದು ಮತ್ತು ಸ್ತುತಿಯು ಅವನಿಗೆ, ಅವನು ಜೀವ ನೀಡುವವನು ಮತ್ತು ಮೃತಪಡಿಸುವವನು, ಅವನು ಎಂದೆಂದೂ ಮರಣಹೊಂದದೆ ಶಾಶ್ವತವಾಗಿ ಜೀವಿಸುವವನು, ಒಳಿತು ಅವನ ಕೈಯಲ್ಲಿದೆ ಮತ್ತು ಅವನು ಎಲ್ಲಾ ವಿಷಯಗಳಲ್ಲೂ ಸಾಮರ್ಥ್ಯವುಳ್ಳವನು.” [ಅತ್ತಿರ್ಮಿದಿ 3428]

## ಪ್ರಯಾಣದ ಪ್ರಾರ್ಥನೆ

﴿ سُبۡحَٰنَ ٱلَّذِي سَخَّرَ لَنَا هَٰذَا وَمَا كُنَّا لَهُۥ مُقۡرِنِينَ ١٣ وَإِنَّآ إِلَىٰ رَبِّنَا لَمُنقَلِبُونَ ١٤ ﴾

(ಸುಬ್‌ಹಾನಲ್ಲದೀ ಸಖ್ಖರ ಲನಾ ಹಾದಾ ವಮಾ ಕುನ್ನಾ ಲಹೂ ಮುಕ್ರಿನೀನ್, ವಇನ್ನಾ ಇಲಾ ರಬ್ಬಿನಾ ಲಮುನ್ಕಲಿಬೂನ್)

“ಇದನ್ನು ನಮ್ಮ ನಿಯಂತ್ರಣಕ್ಕೆ ಕೊಟ್ಟವನು ಸರ್ವ ನ್ಯೂನತೆಗಳಿಂದಲೂ ಪರಿಶುದ್ಧನು, ಇದನ್ನು ನಿಯಂತ್ರಿಸಲು ನಮಗೆ ಸಾಧ್ಯವಿರಲಿಲ್ಲ, ನಾವು ನಮ್ಮ ರಬ್ಬ್‌ನ ಕಡೆಗೆ ಮರಳುವವರು.” [ಕುರ್‌ಆನ್ 43:13-14]

## ಯಾತ್ರಿಕನನ್ನು ಬೀಳ್ಕೊಡುವಾಗ

«أَسْتَوْدِعُ اللهَ دِينَكَ، وَأَمَانَتَكَ، وَخَوَاتِيمَ عَمَلِكَ»

(ಅಸ್ತೌದಿಉಲ್ಲಾಹ ದೀನಕ ವಅಮಾನತಕ ವಖವಾತೀಮ ಅಮಲಿಕ್)

“ನಾನು ನಿನ್ನ ಧರ್ಮ, ಸುರಕ್ಷತೆ ಮತ್ತು ನಿನ್ನ ಕರ್ಮದ ಅಂತ್ಯವನ್ನು ಅಲ್ಲಾಹನ ಸಂರಕ್ಷಣೆಯಲ್ಲಿಡುತ್ತೇನೆ.” [ಅಬೂ ದಾವೂದ್ 2601]

## ಯಾತ್ರೆ ಹೊರಡುವಾಗ ತಾನು ಬಿಟ್ಟು ಹೋಗುವವರಿಗೆ

«أَسْتَوْدِعُكُمُ اللهَ الَّذِي لَا تَضِيعُ وَدَائِعُهُ»

(ಅಸ್ತೌದಿಉಕುಮುಲ್ಲಾಹಲ್ಲದೀ ಲಾ ತದೀಉ ವದಾಇಉಹೂ)

“ನಾನು ನಿಮ್ಮನ್ನು ಅಲ್ಲಾಹನ ಸಂರಕ್ಷಣೆಯಲ್ಲಿ ಅರ್ಪಿಸಿದ್ದೇನೆ. ಅವನ ಸಂರಕ್ಷಣೆಯಲ್ಲಿ ಅರ್ಪಿಸಲ್ಪಟ್ಟದ್ದು ಎಂದೂ ನಷ್ಟವಾಗದು.”

[ಅಸ್ಸಿಲ್ಸಿಲತು ಸ್ಸಹೀಹಃ 16]

## ದುಃಖ, ವ್ಯಥೆ ಎದುರಾದರೆ

«لَا إِلٰهَ إِلَّا أَنْتَ سُبْحَانَكَ، إِنِّي كُنْتُ مِنَ الظَّالِمِينَ»

(ಲಾ ಇಲಾಹ ಇಲ್ಲಾ ಅನ್ತ ಸುಬ್‌ಹಾನಕ ಇನ್ನೀ ಕುನ್ತು ಮಿನ ದ್ದಾಲಿಮೀನ್)

"ನೀನಲ್ಲದೆ ಅನ್ಯ ಸತ್ಯ ಆರಾಧ್ಯರಿಲ್ಲ. ನೀನು ಸರ್ವ ನ್ಯೂನತೆಗಳಿಂದಲೂ ಪರಿಶುದ್ಧನು. ಖಂಡಿತವಾಗಿಯೂ ನಾನು ಅಕ್ರಮಿಗಳಲ್ಲಿ ಸೇರಿದವನಾಗಿದ್ದೆ."

[ಅತ್ತಿರ್ಮಿದಿ 3505]

«اللّٰهُمَّ رَحْمَتَكَ أَرْجُو، فَلَا تَكِلْنِي إِلَى نَفْسِي طَرْفَةَ عَيْنٍ، وَأَصْلِحْ لِي شَأْنِي كُلَّهُ، لَا إِلٰهَ إِلَّا أَنْتَ»

(ಅಲ್ಲಾಹುಮ್ಮ ರಹ್ಮತಕ ಅರ್ಜೂ, ಫಲಾ ತಕಿಲ್‌ನೀ ಇಲಾ ನಫ್ಸೀ ತರ್ಫತ ಐನ್. ವಅಸ್ಲಿಹ್‌ಲೀ ಶಅ್‌ನೀ ಕುಲ್ಲಹೂ ಲಾ ಇಲಾಹ ಇಲ್ಲಾ ಅನ್ತ್)

"ಓ ಅಲ್ಲಾಹ್! ನಿನ್ನ ದಯೆಯನ್ನು ನಾನು ಆಶಿಸುತ್ತಿದ್ದೇನೆ. ಆದ್ದರಿಂದ ಕಣ್ಣೆವೆಯಿಕ್ಕುವಷ್ಟು ಸಮಯ ಕೂಡ ನನ್ನನ್ನು ನನ್ನ ದೇಹದ ಹಂಗಿನಲ್ಲಿ

ಬಿಡಬೇಡ. ನನ್ನ ಎಲ್ಲಾ ವಿಷಯಗಳನ್ನೂ ಸುಧಾರಣೆಗೊಳಿಸು. ನೀನಲ್ಲದೆ ಅನ್ಯ ಸತ್ಯ ಆರಾಧ್ಯರಿಲ್ಲ." [ಅಬೂ ದಾವೂದ್ 5090]

## ಸಾಲಮುಕ್ತನಾಗಲು

«اللَّهُمَّ اكْفِنِي بِحَلَالِكَ عَنْ حَرَامِكَ، وَأَغْنِنِي بِفَضْلِكَ عَمَّنْ سِوَاكَ»

(ಅಲ್ಲಾಹುಮ್ಮಕ್ಫಿನೀ ಬಿಹಲಾಲಿಕ ಅನ್ ಹರಾಮಿಕ ವಅಗ್ನಿನೀ ಬಿಫದ್ಲಿಕ ಅಮ್ಮನ್ ಸಿವಾಕ್)

"ಓ ಅಲ್ಲಾಹ್! ನಿನ್ನ ಹರಾಮ್‌ಗೆ ಬದಲು ನಿನ್ನ ಹಲಾಲನ್ನು ನನಗೆ ಸಾಕು ಮಾಡು. ನೀನಲ್ಲದವರ ಬದಲು ನಿನ್ನ ಔದಾರ್ಯದಿಂದ ನನ್ನನ್ನು ಶ್ರೀಮಂತಗೊಳಿಸು." [ಅತ್ತಿರ್ಮಿದಿ 3563]

«اللَّهُمَّ إِنِّي أَعُوذُ بِكَ مِنَ الْمَأْثَمِ وَالْمَغْرَمِ»

(ಅಲ್ಲಾಹುಮ್ಮ ಇನ್ನೀ ಅಊದು ಬಿಕ ಮಿನಲ್ ಮಅ್‌ಸಮಿ ವಲ್ ಮಗ್ರಮ್)

“ಓ ಅಲ್ಲಾಹ್! ಪಾಪಕೃತ್ಯ ಮತ್ತು ಸಾಲಬಾಧೆಯ ಬಗ್ಗೆ ನಿನ್ನಲ್ಲಿ ರಕ್ಷೆ ಬೇಡುತ್ತಿದ್ದೇನೆ.” [ಅಲ್‌ಬುಖಾರಿ 832]

## ಮಾತಾಪಿತರಿಗೆ ಪ್ರಾರ್ಥನೆ

﴿ رَّبِّ ٱرْحَمْهُمَا كَمَا رَبَّيَانِي صَغِيرًا ﴾ ٢٤

(ರಬ್ಬಿರ್ಹಮ್‌ಹುಮಾ ಕಮಾ ರಬ್ಬಯಾನೀ ಸಗೀರಾ)

“ಓ ನಮ್ಮ ರಬ್ಬೇ! ನಾನು ಚಿಕ್ಕವನಾಗಿರುವಾಗ ಅವರು ನನ್ನನ್ನು ಸಾಕಿ ಸಲಹಿದಂತೆ ಅವರ ಮೇಲೆ ದಯೆ ತೋರು.” [ಕುರ್‌ಆನ್ 17:24]

## ಕುಟುಂಬಕ್ಕೆ ಪ್ರಾರ್ಥನೆ

﴿ رَبَّنَا هَبْ لَنَا مِنْ أَزْوَٰجِنَا وَذُرِّيَّٰتِنَا قُرَّةَ أَعْيُنٍ
وَٱجْعَلْنَا لِلْمُتَّقِينَ إِمَامًا ﴾ ٧٤

(ರಬ್ಬನಾ ಹಬ್‌ಲನಾ ಮಿನ್ ಅಝ್ವಾಜಿನಾ ವದುರ್ರಿಯ್ಯಾತಿನಾ ಕುರ್ರತ ಅಅ್‌ಯುನಿನ್ ವಜ್‌ಅಲ್‌ನಾ ಲಿಲ್ ಮುತ್ತಕೀನ ಇಮಾಮಾ)

“ಓ ನಮ್ಮ ರಬ್ಬೇ! ನಮ್ಮ ಸಂಗಾತಿಗಳಲ್ಲಿ ಮತ್ತು ಸಂತತಿಗಳಲ್ಲಿ ನಮಗೆ ಕಣ್ತಂಪನ್ನು ದಯಪಾಲಿಸು ಮತ್ತು ನಮ್ಮನ್ನು ವಿಶ್ವಾಸಿಗಳಿಗೆ ನಾಯಕರನ್ನಾಗಿ ಮಾಡು.” [ಕುರ್‌ಆನ್ 25:74]

## ಜನಾಝ ನಮಾಝ್‌ನಲ್ಲಿ

«اللّٰهُمَّ اغْفِرْ لَهُ وَارْحَمْهُ، وَعَافِهِ وَاعْفُ عَنْهُ، وَأَكْرِمْ نُزُلَهُ، وَوَسِّعْ مَدْخَلَهُ، وَاغْسِلْهُ بِالْمَاءِ وَالثَّلْجِ وَالْبَرَدِ، وَنَقِّهِ مِنَ الْخَطَايَا كَمَا نَقَّيْتَ الثَّوْبَ الْأَبْيَضَ مِنَ الدَّنَسِ، وَأَبْدِلْهُ دَارًا خَيْرًا مِنْ دَارِهِ، وَأَهْلًا خَيْرًا مِنْ أَهْلِهِ، وَزَوْجًا خَيْرًا مِنْ زَوْجِهِ، وَأَدْخِلْهُ الْجَنَّةَ، وَأَعِذْهُ مِنْ عَذَابِ الْقَبْرِ وَعَذَابِ النَّارِ»

(ಅಲ್ಲಾಹುಮ್ಮಗ್ಫಿರ್ ಲಹೂ ವರ್‌ಹಮ್‌ಹೂ, ವಆಫಿಹೀ, ವಅ್‌ಫು ಅನ್‌ಹು, ವಅಕ್ರಿಮ್ ನುಝುಲಹೂ, ವವಸ್ಸಿಅ್

ಮದ್ಖಲಹೂ, ವಗ್ಸಿಲ್‌ಹು ಬಿಲ್ ಮಾಇ ವಸ್ಸಲ್ಜಿ ವಲ್ ಬರದಿ, ವನಕ್ಕಿಹೀ ಮಿನಲ್ ಖತಾಯಾ ಕಮಾ ನಕ್ಕಯ್ತ ಸೌಬಲ್ ಅಬ್ಯದ ಮಿನ ದ್ದನಸ್, ವಅಬ್ದಿಲ್‌ಹೂ ದಾರನ್ ಖೈರನ್ ಮಿನ್ ದಾರಿಹೀ, ವಅಹ್ಲನ್ ಖೈರನ್ ಮಿನ್ ಅಹ್ಲಿಹೀ, ವಝೌಜನ್ ಖೈರನ್ ಮಿನ್ ಝೌಜಿಹೀ, ವಅದ್‌ಖಿಲ್‌ಹುಲ್ ಜನ್ನತ, ವಅಇದ್‌ಹು ಮಿನ್ ಅದಾಬಿಲ್ ಕಬ್ರಿ ವಅದಾಬಿ ನ್ನಾರ್)

“ಓ ಅಲ್ಲಾಹ್! ಇವನಿಗೆ ಕ್ಷಮಿಸು, ಇವನಿಗೆ ದಯೆತೋರು, ಇವನಿಗೆ ಕ್ಷಮಾಪಣೆ ನೀಡು, ಇವನ ಪಾಪಗಳನ್ನು ಮನ್ನಿಸು, ಇವನ ವಾಸಸ್ಥಳವನ್ನು ಸನ್ಮಾನ್ಯಗೊಳಿಸು, ಇವನ ಪ್ರವೇಶದ್ವಾರವನ್ನು ವಿಶಾಲಗೊಳಿಸು, ನೀರು, ಮಂಜುಗಡ್ಡೆ ಮತ್ತು ಹಿಮದ ಮೂಲಕ ಇವನನ್ನು ಶುದ್ಧೀಕರಿಸು, ಶ್ವೇತವಸ್ತ್ರದಿಂದ ಮಾಲಿನ್ಯವನ್ನು ತೊಳೆದುಬಿಡುವಂತೆ ಇವನಿಂದ ಇವನ ಪಾಪಗಳನ್ನು ತೊಳೆದುಬಿಡು, ಇವನಿಗೆ ಇವನ ಮನೆಗಿಂತಲೂ ಉತ್ತಮವಾದ ಒಂದು ಮನೆಯನ್ನು, ಇವನ ಕುಟುಂಬಕ್ಕಿಂತಲೂ ಉತ್ತಮವಾದ ಒಂದು ಕುಟುಂಬವನ್ನು,

ಇವನ ಸಂಗಾತಿಗಿಂತಲೂ ಉತ್ತಮವಾದ ಒಂದು ಸಂಗಾತಿಯನ್ನು ಬದಲಿಯಾಗಿ ನೀಡು. ಇವನನ್ನು ಸ್ವರ್ಗಕ್ಕೆ ಪ್ರವೇಶ ಮಾಡಿಸು. ಗೋರಿಯ ಪರೀಕ್ಷೆಗಳಿಂದ ಮತ್ತು ನರಕಾಗ್ನಿಯ ಶಿಕ್ಷೆಯಿಂದ ಇವನನ್ನು ಪಾರುಮಾಡು."

[ಮುಸ್ಲಿಂ 963]

## ಕೋಪ ಬರುವಾಗ

«أَعُوذُ بِاللهِ مِنَ الشَّيْطَانِ الرَّجِيمِ»

(ಅಊದು ಬಿಲ್ಲಾಹಿ ಮಿನ ಶ್ಶೈತಾನಿ ರ್ರಜೀಮ್)

"ಶಪಿಸಲ್ಪಟ್ಟ ಶೈತಾನನಿಂದ ನಾನು ಅಲ್ಲಾಹನಲ್ಲಿ ರಕ್ಷೆ ಬೇಡುತ್ತಿದ್ದೇನೆ."

[ಅಲ್‌ಬುಖಾರಿ 6115]

## ಪಾಪಮುಕ್ತಿಗಾಗಿ ಪ್ರಾರ್ಥನೆ

«اللَّهُمَّ إِنَّكَ عَفُوٌّ تُحِبُّ الْعَفْوَ فَاعْفُ عَنِّي»

(ಅಲ್ಲಾಹುಮ್ಮ ಇನ್ನಕ ಅಫುವ್ವುನ್ ತುಹಿಬ್ಬುಲ್ ಅಫ್ವ
ಫಅ್‌ಫು ಅನ್ನೀ)

"ಓ ಅಲ್ಲಾಹ್! ನೀನು ಅತ್ಯಧಿಕ ಕ್ಷಮಿಸುವವನು. ನೀನು ಕ್ಷಮೆಯನ್ನು ಇಷ್ಟಪಡುವೆ. ಆದುದರಿಂದ ನನ್ನನ್ನು ಕ್ಷಮಿಸು."

[ಅತ್ತಿರ್ಮಿದಿ 3513]

«أَسْتَغْفِرُ اللهَ الَّذِي لَا إِلٰهَ إِلَّا هُوَ الْحَيُّ
الْقَيُّومُ، وَأَتُوبُ إِلَيْهِ»

(ಅಸ್ತಗ್ಫಿರುಲ್ಲಾಹಲ್ಲದೀ ಲಾ ಇಲಾಹ ಇಲ್ಲಾ ಹುವಲ್ ಹಯ್ಯುಲ್
ಕಯ್ಯೂಮು ವಅತೂಬು ಇಲೈಹಿ)

"ಅಲ್ಲಾಹನಲ್ಲಿ ನಾನು ಕ್ಷಮೆ ಬೇಡುತ್ತಿದ್ದೇನೆ. ಅವನ ಹೊರತು ಅನ್ಯ ಸತ್ಯ ಆರಾಧ್ಯರಿಲ್ಲ. ಅವನು ಎಂದೆಂದಿಗೂ ಜೀವಿಸಿರುವವನೂ ಎಲ್ಲವನ್ನೂ ನಿಯಂತ್ರಿಸುವವನೂ ಆಗಿದ್ದಾನೆ. ನಾನು ಅವನೆಡೆಗೆ ಪಶ್ಚಾತ್ತಾಪಪಟ್ಟು ಮರಳುತ್ತಿದ್ದೇನೆ." [ಅಬೂ ದಾವೂದ್ 1517]

## ಸಭೆಯ ಪ್ರಾಯಶ್ಚಿತ್ತ (ಕಫ್ಫಾರತುಲ್ ಮಜ್ಲಿಸ್)

«سُبْحَانَكَ اللَّهُمَّ وَبِحَمْدِكَ، أَشْهَدُ أَنْ لَا إِلٰهَ إِلَّا أَنْتَ، أَسْتَغْفِرُكَ وَأَتُوبُ إِلَيْكَ»

(ಸುಬ್‌ಹಾನಕಲ್ಲಾಹುಮ್ಮ ವಬಿಹಮ್ದಿಕ ಅಶ್‌ಹದು ಅನ್ ಲಾ ಇಲಾಹ ಇಲ್ಲಾ ಅನ್ತ ಅಸ್ತಗ್ಫಿರುಕ ವಅತೂಬು ಇಲೈಕ್)

"ಓ ಅಲ್ಲಾಹ್! ನೀನು ಸರ್ವ ನ್ಯೂನತೆಗಳಿಂದಲೂ ಪರಿಶುದ್ಧನು. ನಿನ್ನ ಸ್ತುತಿಯೊಂದಿಗೆ. ನಿನ್ನ ಹೊರತು ಅನ್ಯ ಸತ್ಯ ಆರಾಧ್ಯರಿಲ್ಲವೆಂದು ನಾನು ಸಾಕ್ಷಿ ನುಡಿಯುತ್ತೇನೆ. ನಿನ್ನಲ್ಲಿ ಕ್ಷಮೆ ಬೇಡುತ್ತಿದ್ದೇನೆ ಮತ್ತು ನಿನ್ನೆಡೆಗೆ ಪಶ್ಚಾತ್ತಾಪದಿಂದ ಮರಳುತ್ತಿದ್ದೇನೆ."

[ಅಸ್ಸಿಲ್ಸಿಲತು ಸ್ಸಹೀಹಃ 81]

## ಸಯ್ಯಿದುಲ್ ಇಸ್ತಿಗ್ಫಾರ್

«اللَّهُمَّ أَنْتَ رَبِّي لَا إِلَهَ إِلَّا أَنْتَ، خَلَقْتَنِي، وَأَنَا عَبْدُكَ، وَأَنَا عَلَى عَهْدِكَ وَوَعْدِكَ مَا اسْتَطَعْتُ، أَعُوذُ بِكَ مِنْ شَرِّ مَا صَنَعْتُ، أَبُوءُ لَكَ بِنِعْمَتِكَ عَلَيَّ، وَأَبُوءُ بِذَنْبِي، فَاغْفِرْ لِي، إِنَّهُ لَا يَغْفِرُ الذُّنُوبَ إِلَّا أَنْتَ»

(ಅಲ್ಲಾಹುಮ್ಮ ಅನ್ತ ರಬ್ಬೀ ಲಾ ಇಲಾಹ ಇಲ್ಲಾ ಅನ್ತ ಖಲಕ್ತನೀ ವಅನ ಅಬ್ದುಕ, ವಅನ ಅಲಾ ಅಹ್ದಿಕ ವವಅ್‌ದಿಕ ಮಸ್ತತಅ್‌ತು, ಅಊದು ಬಿಕ ಮಿನ್ ಶರ್‍ರಿ ಮಾ ಸನಅ್‌ತು, ಅಬೂಉ ಲಕ ಬಿನಿಅ್‌ಮತಿಕ ಅಲಯ್ಯ, ವಅಬೂಉ ಬಿದಮ್ಬೀ ಫಗ್‌ಫಿರ್ ಲೀ ಇನ್ನಹೂ ಲಾ ಯಗ್‌ಫಿರು ದ್ದುನೂಬ ಇಲ್ಲಾ ಅನ್ತ್)

"ಓ ಅಲ್ಲಾಹ್! ನೀನು ನನ್ನ ರಬ್ಬ್. ನೀನಲ್ಲದೆ ಅನ್ಯ ಸತ್ಯ ಆರಾಧ್ಯರಿಲ್ಲ. ನೀನು ನನ್ನನ್ನು ಸೃಷ್ಟಿಸಿರುವೆ ಮತ್ತು ನಾನು ನಿನ್ನ ದಾಸ. ನನಗೆ

ಸಾಧ್ಯವಾದಷ್ಟು ನಾನು ನಿನ್ನ ಕರಾರು ಮತ್ತು ವಾಗ್ದಾನವನ್ನು ಪಾಲಿಸುತ್ತಿರುವೆ. ನಾನು ಮಾಡಿದ ಕರ್ಮಗಳ ಕೆಡುಕಿನ ಬಗ್ಗೆ ನಾನು ನಿನ್ನಲ್ಲಿ ರಕ್ಷೆ ಬೇಡುತ್ತಿದ್ದೇನೆ. ನೀನು ನನ್ನ ಮೇಲೆ ಸುರಿಸಿದ ಅನುಗ್ರಹಗಳಿಗಾಗಿ ನಾನು ನಿನಗೆ ಶರಣಾಗುತ್ತಿರುವೆ. ನನ್ನ ಪಾಪಗಳಿಗಾಗಿ ನಾನು ನಿನಗೆ ಶರಣಾಗುತ್ತಿರುವೆ. ಆದುದರಿಂದ ನನ್ನನ್ನು ಕ್ಷಮಿಸು. ಖಂಡಿತವಾಗಿಯೂ ನೀನಲ್ಲದೆ ಪಾಪಗಳನ್ನು ಕ್ಷಮಿಸುವವರಿಲ್ಲ."

[ಅಲ್‌ಬುಖಾರಿ 5947]

## ಮಲಗುವಾಗ

«اللَّهُمَّ بِاسْمِكَ أَمُوتُ وَأَحْيَا»

(ಅಲ್ಲಾಹುಮ್ಮ ಬಿಸ್ಮಿಕ ಅಮೂತು ವಅಹ್ಯಾ)

"ಓ ಅಲ್ಲಾಹ್! ನಿನ್ನ ನಾಮದಿಂದ ನಾನು ಮರಣಹೊಂದುತ್ತೇನೆ ಮತ್ತು ನಿನ್ನ ನಾಮದಿಂದ ನಾನು ಬದುಕುತ್ತೇನೆ." [ಅಲ್‌ಬುಖಾರಿ 6314]

Designed by:
IMAGE MEDIA SOLUTIONS
Puttur

# ನಮ್ಮ ಧ್ಯೇಯೋದ್ದೇಶಗಳು

ಕುರ್‌ಆನ್ ಮತ್ತು ಸುನ್ನತ್ತಿನೆಡೆಗೆ ಮುಸ್ಲಿಮರನ್ನು ಆಹ್ವಾನಿಸುವುದು, ಅನ್ಯಧರ್ಮೀಯರಿಗೆ ಇಸ್ಲಾಮಿನ ಸಂದೇಶವನ್ನು ತಲುಪಿಸುವುದು, ಇಸ್ಲಾಮಿನ ನೈಜ ಆದರ್ಶದ ಸಿ.ಡಿ./ಡಿ.ವಿ.ಡಿ./ಪುಸ್ತಕ ಮತ್ತು ಕರಪತ್ರಗಳನ್ನು ಮುದ್ರಿಸಿ ವಿತರಿಸುವುದು.

# ನಮ್ಮ ಚಟುವಟಿಕೆಗಳು

- ಬ್ಯಾರಿ ಫ್ಯಾಮಿಲಿ ಕ್ಲಾಸ್ (ಪ್ರತಿ ಶುಕ್ರವಾರ ಮಗ್ರಿಬ್ ನಮಾಝ್ ಬಳಿಕ ಇಶಾ ತನಕ)
- ಮಹಿಳೆಯರಿಗೆ ಕುರ್‌ಆನ್ ತಫ್ಸೀರ್ ತರಗತಿ
- ಬ್ಯಾರಿ ಮಕ್ಕಳಿಗೆ ಮದ್ರಸ
- ಕುರ್‌ಆನ್ ತಜ್ವೀದ್ ತರಗತಿ-ಪುರುಷರಿಗೆ (ಬ್ಯಾರಿ)
- ಸ್ಟ್ರೀಟ್ ದಅ್‌ವಾ ಕಾರ್ಯಕ್ರಮ
- ಕನ್ನಡ ಮತ್ತು ಇತರ ಭಾಷೆಗಳಲ್ಲಿ ಕರಪತ್ರ ಮತ್ತು ಪುಸ್ತಕಗಳ ಸಂಗ್ರಹ ಹಾಗೂ ವಿತರಣೆ


مجموعة جدة للدعوة الإسلامية

ಜಿದ್ದಾ ದಅ್‌ವಾ ಗ್ರೂಪ್ (K.S.A.)

Contact: 050 1651259, 050 8139851
050 2036090, 050 4690034